ರೂಪಾಯಿಗಳ ಯೋಜನೆಯೇನಿದೆ ಅದಕ್ಕೆ ಮಂಜುರಾತಿ ನೀಡುತ್ತೀರೋ ಹೇಗೆ ಎಂದು ದಯವಿಟ್ಟು ಸ್ಪಷ್ಟವಾಗಿ ಹೇಳಬೇಕು.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕೇಂದ್ರ ಸರ್ಕಾರದಿಂದ ಐವತ್ತು ಪರ್‌ಸೆಂಟ್ ಹಣವನ್ನು ಕೊಡಲು ಒಪ್ಪಿದ್ದಾರೆ. ರಾಜ್ಯ ಸರ್ಕಾರವು ಸಹ accelerated watersupply scheme ..... ನಲ್ಲಿ ಐವತ್ತು ಪರ್‌ಸೆಂಟ್ ಹಣವನ್ನು ಕೊಡಬೇಕು. ಅದರ ಬಗ್ಗೆ ಬೋರ್ಡ್‌ನಿಂದ ನಮಗೆ ಪ್ರಪೋಸಲ್ ಬಂದಿದೆ.

ಅದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಬೇಗನೆ ಕೊಟ್ಟು ಅದರ ಬಗ್ಗೆ ಕ್ರಮತಗೆದುಕೊಳ್ಳುತ್ತೇವೆ ಮತ್ತು ಅರ್ಧ ಭಾಗದಷ್ಟು ಹಣವನ್ನು ಕೊಡಲು ಕ್ರಮತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಅಧ್ಯಕ್ಷರೆ. ಆ ರೀತಿ ಹಣವನ್ನು ಕೊಡುವುದಾಗಿದ್ದರೆ ಎಷ್ಟು ದಿವಸದಲ್ಲಿ ಕೊಡುತ್ತೀರೆಂದು ನಿರ್ದಿಷ್ಟವಾಗಿ ಹೇಳಬೇಕು. ಏಳು ದಿವಸಕ್ಕೆ ಒಂದು ಸಾರಿ ಕುಡಿಯವ ನೀರನ್ನು ಬಿಡುತ್ತಾರೆ. ಆ ರೀತಿ ಸಮಸ್ಯೆ ಇದೆಯೆಂದು ಹೇಳುತ್ತೇನೆ. ಮೂರು ಕಿಲೋಮೀಟರ್‌ವರೆಗೆ ಹೋಗಿ ನೀರನ್ನು ತರಬೇಕಾದ ಪರಿಸ್ಥಿತಿ ಇದೆ ಅಂಥ ಗಂಭೀರವಾದ ಪರಿಸ್ಥಿತಿ ಇದ್ದಾಗಲೂ ಸಹ ತಾವು ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಹೇಳುವ ಉತ್ತರವೂ ಸಾರ್ಥಕವಾದ ಉತ್ತರವಾಗುವುದಿಲ್ಲ. ಆದ್ದರಿಂದ ತಾವು ನಿರ್ದಿಷ್ಟವಾಗಿ ಎಷ್ಟು ದಿವಸಗಳಲ್ಲಿ ಹಣವನ್ನು ಬಿಡುಗಡೆ ಮಾಡುತ್ತೇವೆ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಿ.

ಶ್ರೀ ವೈಜನಾಥ ಪಾಟೀಲ್ : ಆಗಷ್ಟು ಬೇಗ ಅದಕ್ಕೆ ಅಪ್ರೂವಲ್ ಕೊಡುತ್ತೇವೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ನಿರ್ದಿಷ್ಟವಾದ ಸಮಯವನ್ನು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಆದಷ್ಟು ಬೇಗ ಮಂಜೂರು ಮಾಡುವುದರ ಜೊತೆಗೆ ನಿರ್ದಿಷ್ಟವಾದ ಸಮಯವನ್ನು ಹೇಳಿ. ತಾವು ಅನೇಕ ಯೋಜನೆಗಳಿಗೆ ಮಂಜೂರಾತಿ ನೀಡುತ್ತೀರಿ, ಅದರ ಜೊತೆಯಲ್ಲಿ ಇದಕ್ಕೂ ಮಂಜೂರಾತಿ ಕೊಡಿ. ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು ಕೆಲಸವನ್ನು ಪ್ರಾರಂಭ ಮಾಡುವುದಕ್ಕೇನು ತೊಂದರೆ? ಆದಷ್ಟು ಬೇಗನೆ ಮಾಡುತ್ತೇನೆ ಎಂದು ಹೇಳಿದರೆ, ಒಂದು ನಿರ್ದಿಷ್ಟವಾದ ಸಮಯ ಹೇಳಿ.

(3) ಗ್ರಾಮ ಪಂಚಾಯತಿ ಚುನಾವಣೆಗಳು ಆದ ನಂತರ ಅನೇಕ ಗ್ರಾಮ ಪಂಚಾಯತ್ ಕಚೇರಿಗಳಿಗೆ ಹಳೆಯ ಮಂಡಲ್ ಪಂಚಾಯತ್‌ಗಳು ಪಾವತಿ ಮಾಡಲು ಬಾಕಿ ಇರುವ ತ್ ಸಂಪರ್ಕವನ್ನು ಕಡಿತಗೊಳಿಸಿರುವ ಬಗ್ಗೆ.

ಶ್ರೀ ಬಿ. ರಮಾನಾಥ ರೈ (ಬಂಟ್ವಾಳ) : ಮಾನ್ಯ ಅಧ್ಯಕ್ಷರೇ, ಹಳೆಯ ಮಂಡಲ್ ಪಂಚಾಯತಿಗಳಿಂದ ವಿದ್ಯುತ್ ಬಾಕಿ ಪಾವತಿ ಮಾಡದೇ ಇರುವುದರಿಂದ ಈಗಿನ ಗ್ರಾಮಪಂಚಾಯತಿ ಕಚೇರಿಗಳ ವಿದ್ಯುತ್ ಸಂಪರ್ಕವನ್ನು ತೆಗೆದಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು : ಅವರು ಡೆನ್ಮಾರ್ಕ್ ಪ್ರೈಮ್ ಮಿನಿಸ್ಟರ್ ಅವರ ಪ್ರೋಗ್ರಾಮ್‌ಗೆ ಹೋಗಿದ್ದಾರೆ. ವಸತಿ ಸಚಿವರು ಅವರ ಪರವಾಗಿ ಉತ್ತರವನ್ನು ಕೊಡುತ್ತಾರೆ.

ಶ್ರೀ ಬಸವರಾಜರಾಯರೆಡ್ಡಿ (ವಸತಿಮಂತ್ರಿ) : ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ ಈ ಉತ್ತರವನ್ನು ಕೊಡುವುದಕ್ಕೆ ತಮ್ಮ ಅಪ್ಪಣೆಯನ್ನು ಕೋರುತ್ತೇನೆ.

ಹಿಂದಿನ ಗ್ರಾಮ : ಟೌನ್: ಮಂಡಲ : ಮಧ್ಯಂತರ ಮಂಡಲ ಪಂಚಾಯಿತಿಗಳು, ರಸ್ತೆ ದೀಪ ಮತ್ತು ನೀರು ಸರಬರಾಜು ಯೋಜನೆಗಳಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಒದಗಿಸಿರುವ ವಿದ್ಯುತ್ ಬಾಕಿ ಸುಮಾರು ರೂ. 59.54 ಕೋಟಿಯನ್ನು ದಿನಾಂಕ : 31.3.1995ರ ಅಂತ್ಯದವರೆಗೆ ಮಂಡಳಿಗೆ ನೀಡಬೇಕಾಗಿದೆ.

ಹಿಂದಿನ ವಿದ್ಯುತ್ ಬಾಕಿ ಹಣವನ್ನು ಗ್ರಾಮ ಪಂಚಾಯಿತಿಗಳು ಮಂಡಳಿಗೆ ಕಟ್ಟುವ ಬಗ್ಗೆ ಸರ್ಕಾರವು ಸೂಚನೆಗಳನ್ನು ನೀಡುವವರೆಗೆ, ಏಪ್ರಿಲ್ 1994ರ ನಂತರ ಗ್ರಾಮ ಪಂಚಾಯಿತಿಗಳಿಗೆ ಮಂಡಳಿಯು ಒದಗಿಸಿರುವ ವಿದ್ಯುಚ್ಛಕ್ತಿ ಬಿಲ್ಲನ್ನು ಪ್ರತಿಯೊಂದು ಗ್ರಾಮ ಪಂಚಾಯಿತಿಗಳು ಸರ್ಕಾರವು ಬಿಡುಗಡೆ ಮಾಡಿರುವ ಅನುದಾನದ ಹಣದಿಂದ ಕಟ್ಟಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಗ್ರಾಮ ಪಂಚಾಯಿತಿಗಳು ಕ್ರಮವಾಗಿ ವಿದ್ಯುಚ್ಛಕ್ತಿ ಬಿಲ್ಲನ್ನು ಮಂಡಳಿಗೆ ಪಾವತಿ ಮಾಡಿವೆಯೋ ಎಂಬುದನ್ನು ಖಾತ್ರಿಪಡಿಸಿಕೊಳ್ಳುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ದಿನಾಂಕ : 8.9.1994 ರಂದು ಸೂಚನೆಗಳನ್ನು ನೀಡಿದೆ.

ಹಿಂದಿನ ಬಾಕಿ ರೂ. 59.94 ಕೋಟಿಯಲ್ಲಿ, ರೂ. 32.69 ಕೋಟಿಯನ್ನು ಹೊಂದಾಣಿಕೆ ಮೂಲಕ ಜಮಾ ತೆಗೆದುಕೊಳ್ಳಲು ಸರ್ಕಾರ ಮಂಡಳಿಗೆ ದಿನಾಂಕ : 31.3.1995 ರಂದು ಬಿಡುಗಡೆ ಮಾಡಿದೆ. 1994-95 ನೇ ಸಾಲಿನಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಗಳಿಗೆ ಸರ್ಕಾರವು ಬಿಡುಗಡೆ ಮಾಡಿದ ರೂ. 1.00 ಲಕ್ಷ ಅನುದಾನದಲ್ಲಿ ರೂ. 12,500-00 ನ್ನು ವಿದ್ಯುಚ್ಛಕ್ತಿ ಮಂಡಳಿಗೆ ಬಾಕಿ ಇರುವ ಬಾಬ್ತಿಗೆ ಕಟ್ಟುವಂತೆ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ದಿನಾಂಕ : 15.4.1995 ರಂದು ಸೂಚನೆಗಳನ್ನು ನೀಡಲಾಗಿದೆ. ಅದರಂತೆ ಸುಮಾರು 7.14 ಕೋಟಿ ರೂ.ಗಳನ್ನು ವಿದ್ಯುಚ್ಛಕ್ತಿ ಮಂಡಳಿಗೆ ಕಟ್ಟಲು ಜಿಲ್ಲಾ ಪಂಚಾಯತಿಗಳು ಕ್ರಮ ತೆಗೆದುಕೊಳ್ಳುತ್ತಿವೆ. ದಿನಾಂಕ : 8.9.1994 ರಂದು ನೀಡಿದ ಸೂಚನೆಗಳ ಪ್ರಕಾರ ಬಹುತೇಕ ಗ್ರಾಮ ಪಂಚಾಯತಿಗಳು 1994-95 ನೇ ಸಾಲಿನಲ್ಲಿ ವಿದ್ಯುಚ್ಛಕ್ತಿ ಮಂಡಳಿಗೆ ವಿದ್ಯುತ್ ಬಿಲ್ಲನ್ನು ಕಟ್ಟುತ್ತಿವೆ. ಲಭ್ಯವಿರುವ ಮಾಹಿತಿಯ ಪ್ರಕಾರ ಸುಮಾರು ರೂ. 3.00 ಕೋಟಿಯನ್ನು ಮಂಡಳಿಗೆ ಕಟ್ಟಲಾಗಿದೆ.

ಗ್ರಾಮ ಪಂಚಾಯಿತಿಗಳು ಸೇರಿದಂತೆ ಸ್ಥಳೀಯ ಸಂಸ್ಥೆಗಳಿಂದ ವಿದ್ಯುಚ್ಛಕ್ತಿ ಮಂಡಳಿಗೆ ಬರಬೇಕಾಗಿರುವ ವಿದ್ಯುತ್ ಬಾಕಿ ಹಣವನ್ನು ಕಟ್ಟಲು 30 ದಿನಗಳ ನೋಟೀಸನ್ನು ನೀಡಿ, ಸ್ವತಃ ಸಂಬಂಧಪಟ್ಟ ಸಂಸ್ಥೆಗಳನ್ನು ಭೇಟಿ ಮಾಡಿ ಇದಕ್ಕೂ ಸಹ ಸದರಿ ಸಂಸ್ಥೆಗಳು ಬಾಕಿ ಹಣವನ್ನು ಪಾವತಿ ಮಾಡದಿದ್ದರೆ ವಿದ್ಯುಚ್ಛಕ್ತಿ ಸಂಪರ್ಕವನ್ನು ತೆಗೆಯಬೇಕೆಂದು ಆದರೆ, ಆಸ್ಪತ್ರೆ, ನೀರು ಸರಬರಾಜು ಯೋಜನೆ ಇತ್ಯಾದಿಗಳ ವಿದ್ಯುತ್ ಸಂಪರ್ಕವನ್ನು ತೆಗೆಯಕೂಡದೆಂದು ವಿದ್ಯುಚ್ಛಕ್ತಿ ಮಂಡಳಿ ಅಧ್ಯಕ್ಷರು ತಮ್ಮ ಕೆಳಮಟ್ಟದ ಅಧಿಕಾರಿಗಳಿಗೆ ದಿನಾಂಕ: 26.7.95 ರಂದು ಸೂಚನೆಗಳನ್ನು ನೀಡಿದ್ದಾರೆ.

ವಿದ್ಯುಚ್ಛಕ್ತಿ ಬಿಲ್ಲನ್ನು ಕಟ್ಟಿಲ್ಲವೆಂಬ ಕಾರಣದಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ದಕ್ಷಿಣ ಕನ್ನಡ ಜಿಲ್ಲೆಯ ಕೆಳಗೆ ನಮೂದಿಸಿರುವ ಗ್ರಾಮ ಪಂಚಾಯಿತಿಗಳ ವಿದ್ಯುತ್ ಸಂಪರ್ಕವನ್ನು ತೆಗೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

	ಗ್ರಾಮ ಪಂಚಾಯಿತಿಗಳ ಹೆಸರು	ವಿದ್ಯುಚ್ಛಕ್ತಿ ಬಾಕಿ
1.	ಜೋಕಟ್ಟೆ, ಮಂಗಳೂರು ತಾಲ್ಲೂಕು	ರೂ. 5,500-00
2.	ಕೋಡಿಂಬಾಡಿ, ಪುತ್ತೂರು ತಾಲ್ಲೂಕು	ರೂ. 21,137-00
3.	ಚಿಕ್ಕಮುದನೂರು, ಪುತ್ತೂರು ತಾಲ್ಲೂಕು	ರೂ. 8,000-00
4.	ಕೋಡಂಬಾಡಿ, ಪುತ್ತೂರು ತಾಲ್ಲೂಕು	ರೂ. 12,500-00

ವಿದ್ಯುಚ್ಛಕ್ತಿ ಬಾಕಿ ಬಿಲ್ಲನ್ನು ಕಟ್ಟಲು 1994-95ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿರುವ ರೂ. 12,500-00 ಅನುದಾನದ ಹಣವನ್ನು ಮಂಡಳಿಗೆ ಪಾವತಿ ಮಾಡಿ ವಿದ್ಯುಚ್ಛಕ್ತಿ ಮರು ಸಂಪರ್ಕವನ್ನು ಪಡೆಯುವಂತೆ ಸದರಿ ಗ್ರಾಮ ಪಂಚಾಯಿತಿಗಳಿಗೆ ಸೂಚನೆಗಳನ್ನು ನೀಡಲಾಗಿದೆ.

ಶ್ರೀ ಬಿ. ರಮಾನಾಥರೈ : ಸನ್ಮಾನ್ಯ ಅಧ್ಯಕ್ಷರೇ, ಹಿಂದಿನ ಮಂಡಲ್ ಪಂಚಾಯತ್‌ಗಳು ಈಗ ಗ್ರಾಮಪಂಚಾಯತಿಗಳಾಗಿ ಪರಿವರ್ತನೆಗೊಂಡನಂತರ ಎರಡು-ಮೂರು ಗ್ರಾಮ ಪಂಚಾಯತಿಗಳಾಗಿ ಸೇರ್ಪಡೆಯಾಗಿವೆ. ಕೆಲವು ಮಂಡಲ್ ಪಂಚಾಯತಿಗಳು ಇದ್ದಾಗ ನೀರು ಸರಬರಾಜು ಯೋಜನೆ, ಗಂಗಾಕಲ್ಯಾಣ ಯೋಜನೆ ಇನ್ನಿತರ ಯೋಜನೆಗಳ ಅಡಿಯಲ್ಲಿ ವಿದ್ಯುತ್ ವೆಚ್ಚ ಪಾವತಿ ಮಾಡತಕ್ಕಂಥ ಸಂದರ್ಭದಲ್ಲಿ ದೊಡ್ಡ ಮೊತ್ತವನ್ನು ಬಾಕಿ ಇಟ್ಟುಕೊಂಡಿರತಕ್ಕಂಥಾದ್ದು ನಮಗೆಲ್ಲರಿಗೂ ತಿಳಿದಿರತಕ್ಕಂಥ ವಿಚಾರ. ಈಗ ಕೆಲವು ಗ್ರಾಮ ಪಂಚಾಯತಿಗಳಿಗೆ ಸಂಪನ್ಮೂಲಗಳ ಕೊರತೆ ಇರತಕ್ಕಂಥಾದ್ದು ಇದೆ. ಅಂದರೆ ಸರ್ಕಾರ ಏನು ಅಭಿವೃದ್ಧಿ ಕಾರ್ಯಕ್ರಮಕ್ಕೆ ಎಂದು ಅನುವಾದವನ್ನು ಕೊಡುತ್ತಿದೆ, ಅದು ಕಡಿಮೆ ಪ್ರಮಾಣದಿಂದ ಗ್ರಾಮಪಂಚಾಯತಿಯ ಸದಸ್ಯರುಗಳು ಕೂಡಿದ್ದು ಇದನ್ನು ಅಭಿವೃದ್ಧಿಗೋಸ್ಕರವಾಗಿ ಉಪಯೋಗಿಸಬೇಕು ಎಂದು ಹೇಳಿ ಗಲಾಟೆ ಮಾಡುತ್ತಿದ್ದಾರೆ. ಹೀಗಾಗಿ ಈ ವಿದ್ಯುಚ್ಛಕ್ತಿ ಬಾಕಿ ಪಾವತಿ ಮಾಡಬೇಕಾದದ್ದು ಬಾಕಿ ಉಳಿಯುತ್ತಲೇ ಬಂದಿದೆ. ಇದನ್ನು ಪಾವತಿ ಮಾಡತಕ್ಕಂಥ ಶಕ್ತಿ ಇಲ್ಲದೇ ಇರತಕ್ಕಂಥ ಗ್ರಾಮಪಂಚಾಯತಿಗಳು ಇವೆಯೆಂಬುದನ್ನು ಸರ್ಕಾರದ ಗಮನಕ್ಕೆ ನಾನು ತರುತ್ತಿದ್ದೇನೆ. ನನ್ನ ಅಪೇಕ್ಷೆ ಇಷ್ಟೆ. ಮಾನ್ಯ ವಿದ್ಯುತ್ ಮಂತ್ರಿಗಳಾದ ಸನ್ಮಾನ್ಯ ಉಪಮುಖ್ಯಮಂತ್ರಿಗಳು ತಾವು ದಯಮಾಡಿ ಈ ಒಂದು ಗ್ರಾಮಪಂಚಾಯತಿಗಳು ಏನು ಶಕ್ತಿ ಇಲ್ಲದೇ ಇರತಕ್ಕಂಥಾದ್ದು, ದುರ್ಬಲವಾಗಿರುವಂಥಾದ್ದು ಇವೆ, ಅವರ ಬಾಕಿ ಹಣವನ್ನು ಸರ್ಕಾರವೇ ಭರಿಸತಕ್ಕಂಥಾದ್ದು ಅಥವಾ ನಿಮ್ಮ ಪಂಚಾಯತ್ ಇಲಾಖೆಯವರು ಅದನ್ನು ಸಂಪೂರ್ಣವಾಗಿ ಭರಿಸತಕ್ಕಂಥ ಕೆಲಸವನ್ನು ಮಾಡಬೇಕು. ಅಥವಾ ವಿದ್ಯುತ್‌ಚಕ್ತಿ ಇಲಾಖೆಯವರೇ ಅದನ್ನು ಮನ್ನಾ ಮಾಡುವಂಥ ಕಾರ್ಯಮಾಡಿದರೆ ಬಹಳಷ್ಟು ಅನುಕೂಲವಾಗುತ್ತದೆ ಎನ್ನತಕ್ಕಂಥ ಮಾತನ್ನು ಕಳಕಳಿಯಿಂದ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಅಧ್ಯಕ್ಷರೇ, ನನ್ನ ಉತ್ತರದಲ್ಲಿ ಈಗಾಗಲೇ ನಾನು ಸ್ಪಷ್ಟಪಡಿಸಿದ್ದೇನೆ. ಈಗ ಗ್ರಾಮಪಂಚಾಯತಿಗಳಿಗೆ ತಲಾ ಒಂದು ಲಕ್ಷ ರೂಪಾಯಿ ಅನುದಾನವನ್ನು ನಾವು ಕೊಡುತ್ತಿದ್ದೇವೆ. ಅದರಲ್ಲಿ ಕೇವಲ 12,500 ರೂಪಾಯಿಗಳನ್ನು ಮಾತ್ರ ವಿದ್ಯುಚ್ಛಕ್ತಿ ಮಂಡಳಿಗೆ ತುಂಬಿ ಎಂದು ಅವರಿಗೆ ಹೇಳುತ್ತಿದ್ದೇವೆ. 12,500 ರೂಪಾಯಿಗಳನ್ನು ಮಾತ್ರ ನೀವು ಅನುದಾನದಲ್ಲಿ ಅವರಿಗೆ ಕೊಡಿ ಎಂದು ಹೇಳಿದ್ದೇವೆ. ಇದರಿಂದ ಬೇರೆ ಕೆಲಸಗಳಿಗೆ, ಕಾಮಗಾರಿಗಳಿಗೆ ಕುಂಠಿತವಾಗುವುದಿಲ್ಲ, ಮತ್ತೆ ಇದರ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ. ಏನು 59 ಕೋಟಿ 54 ಲಕ್ಷ ರೂಪಾಯಿಗಳನ್ನು ವಿದ್ಯುಚ್ಛಕ್ತಿ ಮಂಡಳಿಗೆ ಹಿಂದಿನ ಪಂಚಾಯತಿಗಳು ತುಂಬಬೇಕಾಗಿತ್ತೋ ಅದರ ಬಗ್ಗೆ ಈಗಾಗಲೇ ಹೊರಡಿಸಲಾದ ದಿನಾಂಕ 31.3.95 ರ ಸರ್ಕಾರಿ ಆಜ್ಞೆ ಪ್ರಕಾರ ಸುಮಾರು 32 ಕೋಟಿ 69 ಲಕ್ಷ ರೂಪಾಯಿಗಳನ್ನು ಈ ಸರ್ಕಾರ ತುಂಬಿದೆ. ಕೆ.ಇ.ಬಿ.ಮಂಡಳಿಗೆ ಬುಕ್ ಅಡ್ಜಸ್ಟ್‌ಮೆಂಟ್‌ನನ್ನು ಸರ್ಕಾರದ ಆಜ್ಞೆ ಮೇರೆಗೆ ಮಾಡಿಕೊಟ್ಟಿದ್ದೇವೆ. ಮತ್ತು ಇದರ ಜೊತೆಗೆ 7 ಕೋಟಿ 14 ಲಕ್ಷ ರೂಪಾಯಿಗಳನ್ನು ಈ 12,500 ರೂ.ಗಳಂತೆ ತುಂಬಬೇಕಾಗಿತ್ತು, ಅದನ್ನು ಬಹುತೇಕ ಪಂಚಾಯತಿಗಳು ಈಗಾಗಲೇ ತುಂಬಿದ್ದಾರೆ. ಮತ್ತೆ ತಾವು ಹೇಳಿದಂತೆ ಮಂಡಲಪಂಚಾಯತ್‌ಗೆ ಕೊಡಬೇಕಾದ ಬಾಕಿ, ಇದು ಎಲ್ಲವೂ 12,500 ರೂಪಾಯಿಗಳ ಒಳಗೇ ಇದೆ. ಉದಾಹರಣೆಗೆ ಜೊಕೆಟ್ಟೊ, ಅಲ್ಲಿ 5,500 ರೂಪಾಯಿ ಇದೆ. ಅವೆಲ್ಲವನ್ನೂ 12,500

ರೂಪಾಯಿ ಒಳಗೇ ತುಂಬುವುದಕ್ಕೆ ಅವಕಾಶ ಇದೆ. ಈಗಾಗಲೇ ಅವರಿಗೆ ಸೂಚನೆ ಕೊಟ್ಟಿದೆ. ಅವರು ತುಂಬುತ್ತಾರೆ ಎಂದು ನನ್ನ ಭಾವನೆ.

ಶ್ರೀ ಬಿ. ರಮಾನಾಥರೈ : ಈಗ ಕೋಡಿಂಬಾಡಿ ಅವರದ್ದು 21 ಸಾವಿರ ರೂಪಾಯಿ ಇದೆ. ಇಲ್ಲಿ ಕೆಲವು ಕಡೆ ವಿದ್ಯುತ್ ಕಡಿತ ಮಾಡಿದ್ದನ್ನು ತೋರಿಸಿದ್ದಾರೆ. ಇನ್ನು ಕೆಲವು ಕಡೆ ಪ್ರಭಾವ ಬೀರಿ ಮುಂದುವರೆಸಿಕೊಂಡು ಹೋಗತಕ್ಕಂಥಾದ್ದು ಕೂಡ ನಡೆಯುತ್ತದೆ. ಆದರೆ ಕೆಲವು ಮಂಡಲ್ ಪಂಚಾಯತಿಗಳು ಗ್ರಾಮ ಪಂಚಾಯತಿಯಾಗಿ ಪರಿವರ್ತನೆಯಾದ ನಂತರ ಇದೊಂದು ದೊಡ್ಡ ಬರ್ಡನ್ ಆಗಿದೆ. ಅಲ್ಲಿ ದೊಡ್ಡ ಮೊತ್ತದ ಹಣ ಪಾವತಿ ಮಾಡಬೇಕಾಗಿರುವುದು ಇದೆ. ಆದ್ದರಿಂದ ಈ ಗ್ರಾಮಪಂಚಾಯತಿಗಳಿಗೆ ವಿದ್ಯುತ್ ಸಂಪರ್ಕವನ್ನು ತೆಗೆದುಬಿಟ್ಟಿದ್ದೀರಿ. ಇದನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಒಂದು ಕಡೆ ನಮ್ಮ ಕುಂದಾಪುರ ತಾಲ್ಲೂಕಿನಲ್ಲಿ ಗಂಗಾಕಲ್ಯಾಣ ಯೋಜನೆ ಪರಿಶಿಷ್ಟವರ್ಗದವರಿಗೆ ಇರತಕ್ಕಂಥ ನೀರು, ಅದನ್ನು ಕೃಷಿಗೆ ಉಪಯೋಗಿಸತಕ್ಕಂಥ ವ್ಯವಸ್ಥೆ ಅದಕ್ಕೆ ವಿದ್ಯುತ್ ಕೊಡತಕ್ಕಂಥ ವ್ಯವಸ್ಥೆಯನ್ನು ತಡೆಹಿಡಿಯುತ್ತೀರಿ. ಅಲ್ಲಿ ವಿದ್ಯುತ್ ಸರಬರಾಜುರದ್ದು ಮಾಡಿದ್ದೀರಿ. ಇದರಿಂದ ರೈತರಿಗೆ ಎಷ್ಟು ತೊಂದರೆಯಾಗಿದೆ ಎಂದು ಯೋಚಿಸಿದ್ದೀರಾ? ಗಂಗಾಕಲ್ಯಾಣ ಯೋಜನೆ ಪರಿಶಿಷ್ಟವರ್ಗದವರು ಕೃಷಿ ಉಪಯೋಗಕ್ಕಾಗಿ ಇರುವಾಗ, ಇಂತಹ ಒಂದು ಗಂಗಾಕಲ್ಯಾಣ ಯೋಜನೆಗೆ ವಿದ್ಯುತ್ ಸಂಪರ್ಕವನ್ನು ತೆಗೆದಿದ್ದೀರಿ ಎಂದರೆ, ಆ ದುರ್ಬಲ ಪರಿಶಿಷ್ಟ ವರ್ಗದವರ ಗತಿ ಏನಾಗಬೇಕು? ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಇಂತಹ ಒಂದು ಬಹಳ ದುರ್ಬಲ ಪರಿಸ್ಥಿತಿಯಲ್ಲಿರತಕ್ಕಂಥ ಗ್ರಾಮಪಂಚಾಯತಿಗಳು ಏನಿವೆ, ಅವುಗಳಿಗೆ ಹಣ ಭರಿಸಲು ಸಂಪನ್ಮೂಲದ ಕೊರತೆ ಇದೆ. ಅವುಗಳು ಹಣ ಭರಿಸಲು ಸಾಧ್ಯವಾಗದೇ ಇರುವ ಕಾರಣಕ್ಕಾಗಿ ನೀವು ಸರ್ಕಾರವೇ ಅದನ್ನು ಮಾಡತಕ್ಕಂಥಾದ್ದು ಅಥವಾ ಈ ಪಂಚಾಯತಿಗಳು ಬದುಕುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರೋ?

ಶ್ರೀ ಬಸವರಾಜ ರಾಯರೆಡ್ಡಿ : ಗಂಗಾಕಲ್ಯಾಣ ಯೋಜನೆ ಗ್ರಾಮೀಣಾಭಿವೃದ್ಧಿಗೆ ಸಂಬಂಧ ಬರುವುದಿಲ್ಲ. ಗ್ರಾಮಾಪಂಚಾಯತಿಗೆ ಬರುವ ಗಂಗಾಕಲ್ಯಾಣ ಯೋಜನೆಯ ಬಿಲ್ ಅನ್ನು ಗ್ರಾಮೀಣಾಭಿವೃದ್ಧಿ ಇಲಾಖೆ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ನಾವು ಅದೇ ಜಿಲ್ಲೆ ಮತ್ತು ತಾಲ್ಲೂಕಿನವರು. ನಮಗೆ ಗೊತ್ತಿರುವುದನ್ನು ನಾವು ಹೇಳುತ್ತಿದ್ದೇವೆ. ನೀವು ಇಲ್ಲಿ ಕುಳಿತುಕೊಂಡು ಇಲ್ಲ ಎಂದು ಹೇಗೆ ಹೇಳುತ್ತೀರಿ?

ಶ್ರೀ ಬಸವರಾಜ ರಾಯರೆಡ್ಡಿ : ಗಂಗಾಕಲ್ಯಾಣ ಯೋಜನೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗಗಳಿಗೆ ಸಣ್ಣ ನೀರಾವರಿ ಇಲಾಖೆಯಿಂದ ಕೊಡುತ್ತಾರೆ. ವಿದ್ಯುಚ್ಛಕ್ತಿ ಬಿಲ್ ಕೊಡುವುದು ಗ್ರಾಮಪಂಚಾಯತಿಗೆ ಸಂಬಂಧಪಟ್ಟಂಥ ವಿಚಾರ ಅಲ್ಲ, ಒಂದುಸಾರಿ ಗಂಗಾಕಲ್ಯಾಣ ಯೋಜನೆಯನ್ನು ಜಾರಿಗೊಳಿಸಿದಮೇಲೆ ಯಾರು ಫಲಾನುಭವಿಗಳು ಇದ್ದಾರೆ, ಅವರೇ ವಿದ್ಯುತ್ ಬಿಲ್ಲನ್ನು ತುಂಬಬೇಕಾಗುತ್ತದೆ. ಗಂಗಾಕಲ್ಯಾಣ ಯೋಜನೆ ನೂರು ಪರ್ಸೆಂಟ್‌ಸಬ್ಸಿಡಿ ಯೋಜನೆ. ಅವರಿಗೆ ಅಲ್ಲಿ ಬೋರ್‌ವೆಲ್ ಹಾಕಿಕೊಡುತ್ತೇವೆ, ಮೋಟಾರ್ ಹಾಕುತ್ತೇವೆ, ಪೈಪ್‌ಲೈನ್ ಮಾಡಿ ಕೊಡುತ್ತೇವೆ. ಫಲಾನುಭವಿಗಳನ್ನು ಗುರುತುಮಾಡಿ ಅವರಿಗೇ ವಹಿಸಿಕೊಡುತ್ತೇವೆ. ಇದಾದ ಮೇಲೆ ಬಳಕೆದಾರರೇ ವಿದ್ಯುತ್ ಬಿಲ್ಲನ್ನು ತುಂಬಿಕೊಳ್ಳಬೇಕೆಂದು ಇದೆ. ಆದ್ದರಿಂದ ಇದು ಗ್ರಾಮೀಣಾಭಿವೃದ್ಧಿ ವ್ಯಾಪ್ತಿಗೆ ಬರುವುದಿಲ್ಲ ಎಂಬುದನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ.